

ಫ್ಲೆಮಿಂಗೊಗಳ ಪ್ರೇಮ ಸಲ್ಲಾಪ



ನ್ಯಾಷನಲ್ ಜಿಯಾಗ್ರಫಿ ನಿಯತಕಾಲಿಕೆಯಲ್ಲಿ ಪ್ರಕಟಗೊಂಡ ಕ್ಷಮಾ ಅವರ ಛಾಯಾಚಿತ್ರ

ಹೋಗುವ ಕ್ರಮ, ಸಂತಾನೋತ್ಪತ್ತಿ ಎಲ್ಲವೂ ವಿಶೇಷ ರೀತಿಯಲ್ಲಿರುತ್ತದೆ. ಕೆಲವು ವರ್ತನೆಗಳು ಮನುಷ್ಯನನ್ನು ಹೋಲುವುದೂ ಉಂಟು ಎನ್ನುವುದನ್ನು ಕಂಡುಕೊಂಡಿರುವ ಕ್ಷಮಾ, ವಿವಿಧ ಸಂದರ್ಭಗಳಲ್ಲಿ ಸೂಕ್ಷ್ಮಗ್ರಾಹಿಯಾಗಿ ತಮ್ಮ ಚಿತ್ರಗಳನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಅಪ್ಪನಿಂದ ಬಳುವಳಿಯಾಗಿ ಬಂದ ಫೋಟೊಗ್ರಫಿಗಾಗಿ ಅವರು ಯಾವುದೇ ತರಬೇತಿ ಪಡೆದಿಲ್ಲವಾದರೂ, ಆಗಾಗ್ಗೆ ಆ ಕ್ಷೇತ್ರದ ಅನುಭವಿಗಳ ಮಾರ್ಗದರ್ಶನ ಪಡೆದಿದ್ದಾರೆ. 'ಯೂಥ್ ಫೋಟೊಗ್ರಫಿ ಸೊಸೈಟಿ'ಯೊಂದಿಗೆ ನಿರಂತರವಾಗಿ ಒಡನಾಟ ಹೊಂದಿರುವುದರ ಜತೆಗೆ, ಆಗಾಗ್ಗೆ ಛಾಯಾಗ್ರಹಣದ ಕುರಿತು ಕಾರ್ಯಾಗಾರಗಳನ್ನು ಮಾಡುತ್ತಿದ್ದಾರೆ.

ಅಳಿವಿನಂಚಿನಲ್ಲಿರುವ ಕರ್ನಾಟಕದ ರಾಜ್ಯಪಕ್ಷಿ ನೀಲಕಂಠ (ಇಂಡಿಯನ್ ರೋಲರ್), ರಿವರ್‌ಟರ್ನ್, ಗೂಬೆ, ಮರಕುಟಿಗ ಸೇರಿದಂತೆ ನೂರಾರು ಬಗೆಯ ಪಕ್ಷಿಗಳ ಬೆಡಗು ಬಿನ್ನಾಣವನ್ನು ತಮ್ಮ ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದಾರೆ. ಪಕ್ಷಿಗಳ ಚಿತ್ರ ಬೇಟೆಗಾಗಿ ಹೋದಾಗ ಅಲ್ಲಿನ ಅನುಭವನ ಕಥನಗಳೇ ವಿಶಿಷ್ಟ ಎನ್ನುವ ಅವರು, ಅವುಗಳನ್ನು ತಮ್ಮ ನೆನಪಿನ ಕೋಶದಲ್ಲಿ ಜತನವಾಗಿರಿಸಿಕೊಂಡು ಇತರ ಪಕ್ಷಿಗಳ ನಡುವಣ ಭಿನ್ನತೆ, ಸಾಮ್ಯತೆಗಳನ್ನು ಗಮನಿಸುತ್ತಿರುತ್ತಾರೆ.

## ಮೀನು ಕೊಟ್ಟು ಪ್ರಪೋಸ್!

ಪ್ರಕೃತಿಯಲ್ಲಿ ಹೆಣ್ಣನ್ನು ಒಲಿಸಿಕೊಳ್ಳಲು, ಆಕರ್ಷಿಸಲು ಗಂಡು ವಿಭಿನ್ನವಾಗಿ ವರ್ತಿಸುವುದು ಸಹಜ. ಅಂಥ ವರ್ತನೆಗಳು ಮನುಷ್ಯನಲ್ಲಷ್ಟೇ ಅಲ್ಲ, ಪಕ್ಷಿ ಪ್ರಪಂಚದಲ್ಲೂ ಇರುವುದನ್ನು ತಮ್ಮ ಪಕ್ಷಿ ಚಿತ್ರಗಳ ಬೇಟೆಯಲ್ಲಿ ಕ್ಷಮಾ ಕಂಡುಕೊಂಡಿದ್ದಾರೆ. ಭದ್ರಾ ಹಿನ್ನೀರು ಪ್ರದೇಶಕ್ಕೆ ಬರುವ ರಿವರ್‌ಟರ್ನ್ ಪಕ್ಷಿಗಳ ಪ್ರೇಮ ನಿವೇದನೆಯನ್ನು ಕ್ಷಣ ಮಾತ್ರದಲ್ಲಿ ಕ್ಯಾಮೆರಾದಲ್ಲಿ ಸೆರೆ ಹಿಡಿದ ಅನುಭವ ತೆರೆದಿಡುತ್ತಾರೆ ಅವರು. ಪ್ರೇಮಿಯೊಬ್ಬ ತನ್ನ ಹುಡುಗಿಗೆ ಕೆಂಗುಲಾಬಿ ಕೊಟ್ಟು ಹೇಗೆ ಪ್ರೇಮ ನಿವೇದನೆ ಮಾಡಿಕೊಳ್ಳುವನೋ, ಅಂತೆಯೇ ಗಂಡು ರಿವರ್‌ಟರ್ನ್ ತನ್ನವಳಿಗಾಗಿ ಕೊಕ್ಕಿನಲ್ಲಿ ಮೀನು ಹಿಡಿದು ಆಕೆಯನ್ನು ಒಲಿಸಿಕೊಳ್ಳುವ ಯತ್ನ ಮಾಡುತ್ತದೆ. ನದಿದಂಡೆಯಲ್ಲಿ ಕೂತಿರುವ ಇನ್ನೂರು ಮುನ್ನೂರು ಪಕ್ಷಿಗಳಲ್ಲಿ ಯಾವುದಾದರೊಂದು ಹೆಣ್ಣು ರಿವರ್‌ಟರ್ನ್ ಗಂಡಿನತ್ತ ಆಕರ್ಷಿತವಾದರೆ ಗಂಡಿಗೆ ಸಾರ್ಥಕ್ಯ ಭಾವ. ಮೀನು ಸ್ವೀಕರಿಸಿ ಗಂಡಿನ ಜತೆಗೆ ತೆರಳುವ ಹೆಣ್ಣು ಸಂತಾನೋತ್ಪತ್ತಿ ಪ್ರಕ್ರಿಯೆಗೆ ಮುನ್ನುಡಿ ಬರೆಯುತ್ತದೆ. ಇಂಥ ಪ್ರಕ್ರಿಯೆಯಲ್ಲಿ ಗಂಡು ರಿವರ್‌ಟರ್ನ್‌ಗಳ ನಡುವೆ ಪೈಪೋಟಿಗೆ ಕೊರತೆಯಿರದು. ಗಂಡೊಂದು ಹಿಡಿದು ತಂದಿದ್ದ ಮೀನನ್ನು ಮತ್ತೊಂದು ಗಂಡು ಕಿತ್ತುಕೊಂಡು ಪ್ರಪೋಸ್ ಮಾಡುವ ಅಪರೂಪದ ಕ್ಷಣಗಳನ್ನೂ ಕ್ಷಮಾ ಸೆರೆಹಿಡಿದಿದ್ದಾರೆ.

ರೂಪದರ್ಶಿಗಳ ಫೋಟೊಗ್ರಫಿಯಲ್ಲಿ ನಿಮಗೆ ರೀ ಟೇಕ್ ಸಿಗಬಹುದು. ಪಕ್ಷಿಲೋಕದಲ್ಲಿ ಹಾಗಲ್ಲ. ಎಲ್ಲವೂ ಸೆಕೆಂಡ್‌ಗಳ ಲೆಕ್ಕದಲ್ಲಿ ನಡೆದುಬಿಡುತ್ತದೆ. ನಿಂತಲ್ಲಿ ನಿಲ್ಲದೇ, ಕೂತಲ್ಲಿ ಕೂರದೇ ಸದಾ ಹಾರಾಡುವ ಹಕ್ಕಿಗಳ ಚಲನವಲನವನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯಲು ಅಪಾರ ಸಮಯ ಮತ್ತು ತಾಳ್ಮೆ ಅತ್ಯಗತ್ಯ ಎನ್ನುತ್ತಾರೆ ಕ್ಷಮಾ.

ಪಕ್ಷಿಯೊಂದು ಹಣ್ಣು ತಿನ್ನುವ ಚಿತ್ರವನ್ನು ಸೆರೆಹಿಡಿಯಲು ಐದಾರು ತಾಸು ಧ್ಯಾನಸ್ಥರಾಗಿ ಕುಳಿತಿದ್ದನ್ನು ನೆನಪಿಸಿಕೊಳ್ಳುವ ಅವರು, ಉತ್ತರಾಖಂಡದಲ್ಲಿ ಗೂಬೆಗಳ ಮಿಲನದ ಚಿತ್ರ ತೆಗೆಯಲು ಪಟ್ಟ ಸಾಹಸ ಮರೆಯಲಾಗದು ಎನ್ನುತ್ತಾರೆ.

ದುಬಾರಿ ಹವ್ಯಾಸವಾಗಿರುವ ಫೋಟೊಗ್ರಫಿಯ ಖರ್ಚುವೆಚ್ಚಗಳನ್ನು ಬರೀ ವೃತ್ತಿಯಿಂದಲೇ ಸರಿದೂಗಿಸಲಾಗದು ಎಂದು ಕಂಡುಕೊಂಡಿರುವ ಕ್ಷಮಾ, ಅದಕ್ಕಾಗಿ ಮಾಡೆಲ್ ಮತ್ತು



ಮರಕುಟಿಗನ ಬೇಟೆಯ ಹುನ್ನಾರ